# ನೀನೇ ಗತಿಯೆನಗೆ ವನಜ ನೇತ್ರೆ

1. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page No. 05.
2. **Ref.:** Purandara Sahitya Darshana, Samputa 2, Adhyatma Darshana edited by Prof. S.K. Ramachandra Rao, page No. 187.
3. **Note:** Lyrics in the above references are same and the singer has followed these wordings.

ರಾಗ: ಗಮನಕ್ರಿಯೆ ತಾಳ: ಮಟ್ಟೆ

ನೀನೇ ಗತಿಯೆನಗೆ ವನಜ ನೇತ್ರೆ || ಪ ||

ಕೈಲಾಸ ಎಂಬೋದು ಕಣ್ಣಿಲಿ ಕಾಣೆ
ಮೈಲುವಾಹನಪಿತ ಎತ್ತ ಪೋದನೊ ಕಾಣೆ || 1 ||

ಸತ್ಯಲೋಕವೆಂಬೋದು ಮಿಥ್ಯವಾಗಿತು ಕಾಣೆ
ಎತ್ತ ಪೋದನು ಬ್ರಹ್ಮ ಏನು ಮಾಡಲಿ ಅಮ್ಮ || 2 ||

ಸರಸಿಜನಾಭನು ಶರಧಿಯೊಳ್ ಮುಳುಗಿದ
ಪುರಂದರ ವಿಠಲನ ಕರುಣಕ್ಕೆ ಪಾತ್ರಳೆ || 3 ||

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿ:**

ಮುಕ್ತಿಗೆ ಕಾರಣವಾಗುವ ಭಕ್ತಿಯನ್ನು ಜೀವರಿಗೆ ಒದಗಿಸುವವಳು ಲಕ್ಷ್ಮಿಯೇ ಆದುದರಿಂದ ಅವಳಲ್ಲದೆ ಬೇರೆ ಯಾವ ದೇವತೆಯೂ ನೆರವಿಗೆ ಬಾರರು; ತ್ರಿಮೂರ್ತಿಗಳೂ ಕಣ್ಮರೆಯಾಗಿ ತಲೆತಪ್ಪಿಸಿಕೊಳ್ಳುವರು ಎಂದು ಪದದ ತಾತ್ಪರ್ಯ.

**ವನಜನೇತ್ರೆ** – ತಾವರೆಗಣ್ಣಿನವಳೆ.

**ಮೈಲುವಾಹನಪಿತ** – ಮಯಿಲ ಎಂದರೆ ನವಿಲು, ಅದನ್ನೇರಿ ಸಾಗುವವನು ಷಣ್ಮುಖ, ಕುಮಾರಸ್ವಾಮಿ; ಅವನ ತಂದೆ, ಶಿವ.

**ಸರಸಿಜನಾಭನು** – ತಾವರೆಯನ್ನು ಹೊಕ್ಕುಳಲ್ಲಿ ಹೊಂದಿದವನು ವಿಷ್ಣು.

**Classification:** Keertane
**Ankita:** purandara vittala
**Location:** NA
**Category:** Lakshmi Stuti
**Sub-Category:** Lakshmi, padma, kannu, navilu, kailasa, satya, loka, brahma, Samudra,
**Pravachana:** NA
**Explanation:** NA